# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

ಮುಕ್ತಗಂಗೋತ್ರಿ, ಮೈಸೂರು – 570 006

**ಪ್ರವೇಶಾತಿ ವಿಭಾಗ**

---

ಸಂಖ್ಯೆ: ಕರಾಮುವಿ/ಪ್ರವಿ/ಎಡಿಎಂ-1/144/2025-26 ದಿನಾಂಕ: 02.07.2025

**ಸುತ್ತೋಲೆ:**

**ವಿಷಯ : ಸರ್ಕಾರದ ಅಲ್ಪ ಸಂಖ್ಯಾತ ಕಲ್ಯಾಣ ಇಲಾಖೆಯಿಂದ ಕರಾಮುವಿ ನಿಲಯಕ್ಕೆ ಶುಲ್ಕ ಪಾವತಿ ಯೋಜನೆಯಡಿ UG/PG/ಇತರೆ ಶೈಕ್ಷಣಿಕ ಕಾರ್ಯಕ್ರಮಗಳಿಗೆ ಅಲ್ಪ ಸಂಖ್ಯಾತ ವರ್ಗದ ವಿದ್ಯಾರ್ಥಿಗಳ ಪ್ರವೇಶಾತಿ ಕುರಿತಂತೆ; (Department of Minority, Government of Karnataka Sponsored Scheme for Minority Students through KSOU)**

**ಉಲ್ಲೇಖ:**1.ಸರ್ಕಾರದ ಆದೇಶ ಸಂಖ್ಯೆ: ಎಂಡಬ್ಲ್ಯೂಡಿ 359 ಎಂಡಿಎಸ್ 2025, 27.05.2025

2. ದಿನಾಂಕ:21.06.2025ರಂದು ನಡೆದ ಸಭೆಯ ತೀರ್ಮಾನ

3. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 01.07.2025

******

ಕರ್ನಾಟಕ ರಾಜ್ಯ ಸರ್ಕಾರವು 2025-26ರ ಆಯವ್ಯಯದಲ್ಲಿ ಘೋಷಿಸಿದಂತೆ ಪದವಿ ಶಿಕ್ಷಣದಿಂದ ವಂಚಿತರಾಗುತ್ತಿರುವ ಅಲ್ಪ ಸಂಖ್ಯಾತ ವರ್ಗದಲ್ಲಿನ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕಾಗಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಮೂಲಕ ಶಿಕ್ಷಣ ನೀಡಲು ಸರ್ಕಾರವು 2025-26ರ ಆರ್ಥಿಕ ಸಾಲಿನಲ್ಲಿ 5.05 ಕೋಟಿ ರೂಗಳ ಅನುದಾನವನ್ನು ಉಲ್ಲೇಖ (1)ರ ಸರ್ಕಾರಿ ಆದೇಶದಲ್ಲಿ ಬಿಡುಗಡೆ ಮಾಡಿರುತ್ತದೆ.

ಈ ಸಂಬಂಧದಲ್ಲಿ ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆಯ ಅಧಿಕಾರಿಗಳು ಹಾಗೂ ವಿಶ್ವವಿದ್ಯಾನಿಲಯದ ಅಧಿಕಾರಿಗಳೊಂದಿಗೆ ದಿನಾಂಕ: 21.06.2025ರಂದು ನಡೆದ ಸಭೆಯಲ್ಲಿ ಅನುಸರಿಸಬೇಕಾದ ಕ್ರಮಗಳ ಕುರಿತು ಒಡಂಬಡಿಕೆ ಮಾಡಿಕೊಳ್ಳುವ ಬಗ್ಗೆ ತೀರ್ಮಾನವಾಗಿರುತ್ತದೆ.

ಅದರಂತೆ ಅಲ್ಪ ಸಂಖ್ಯಾತ ವರ್ಗದ (ಮುಸ್ಲಿಂ, ಜೈನ್, ಕ್ರಿಶ್ಚಿಯನ್, ಸಿಖ್, ಬುದ್ಧಿಸ್ಟ್ ಮತ್ತು ಪಾರ್ಸಿ) ಅರ್ಹ ವಿದ್ಯಾರ್ಥಿಗಳು ವಿಶ್ವವಿದ್ಯಾನಿಲಯದಲ್ಲಿ ವ್ಯಾಸಂಗ ಮಾಡ ಬಯಸುವ ಸ್ನಾತಕ / ಸ್ನಾತಕೋತ್ತರ ಪದವಿ, ಸರ್ಟಿಫಿಕೇಟ್ ಹಾಗೂ ಡಿಪ್ಲೋಮಾ ಶಿಕ್ಷಣಕ್ರಮಗಳಿಗೆ **(Department of Minority, Government of Karnataka Sponsored Scheme for Minority Students through KSOU)** ಅಲ್ಪ ಸಂಖ್ಯಾತ ಕಲ್ಯಾಣ ಇಲಾಖೆಯ ಹಾಗೂ ವಿಶ್ವವಿದ್ಯಾನಿಲಯದ ನಿಬಂಧನೆ ಹಾಗೂ ಶೈಕ್ಷಣಿಕ ಅರ್ಹತೆ ಹಾಗೂ ಇತರೆ

ಮಾರ್ಗಸೂಚಿಗಳನ್ವಯ ನಿಯಮಾನುಸಾರ ಪ್ರವೇಶಾತಿ ನೀಡುವುದು ಮತ್ತು ಈ ವಿದ್ಯಾರ್ಥಿಗಳ ಪರವಾಗಿ ಅಲ್ಪ ಸಂಖ್ಯಾತ ಕಲ್ಯಾಣ ಇಲಾಖೆಯು ಆಯಾ ಸಾಲಿನ ಪ್ರವೇಶಾತಿ ಹಾಗೂ ಪರೀಕ್ಷಾ (ವಾರ್ಷಿಕ / ಎರಡೂ ಸೆಮಿಸ್ಟರ್‌ಗಳ) ಶುಲ್ಕವನ್ನು ಪಾವತಿಸುತ್ತದೆ. ಇದನ್ನು ಬೆಂಗಳೂರಿನ ಹಜ್ ಭವನದಲ್ಲಿ ಸ್ಥಾಪಿಸಿರುವ ವಿವಿಯ ಪ್ರಾದೇಶಿಕ ಕೇಂದ್ರವು ನಿರ್ವಹಣೆ ಮಾಡುತ್ತದೆ.

### I. ಅಲ್ಪ ಸಂಖ್ಯಾತ ವರ್ಗದ ವಿದ್ಯಾರ್ಥಿಯ ಪ್ರವೇಶಾತಿಗೆ ಪರಿಗಣಿಸಬೇಕಾದ ಅಂಶಗಳು:

| ಕ್ರಸಂ | ಇಲಾಖೆ | ನಿಬಂಧನೆಗಳು | ಷರಾ |
|---|---|---|---|
| 1 | ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ | 1. ವಿಶ್ವವಿದ್ಯಾನಿಲಯದ ನಿಯಮಗಳ ಪ್ರಕಾರ ಇತರೆ ವಿದ್ಯಾರ್ಥಿಯ ಪ್ರವೇಶಾತಿಗೆ ಅನುಸರಿಸುವ ಕ್ರಮದಲ್ಲಿಯೇ ಈ ವಿದ್ಯಾಥಿಯು ಬಯಸುವ ಕೋರ್ಸ್‌ಗೆ ಪ್ರವೇಶಾತಿ ಹೊಂದಲು ಇರಬೇಕಾದ ಕನಿಷ್ಟ ವಿದ್ಯಾರ್ಹತೆ ಹೊಂದಿರಬೇಕು.<br>2. ವಿವಿಯ ನಿಯಮಾನುಸಾರ ಪರಿಶೀಲಿಸಬೇಕಾದ ಎಲ್ಲಾ ನಿಬಂಧನೆಗಳನ್ನು ಪೂರೈಸಿರಬೇಕು | • ಅರ್ಜಿಯನ್ನು ಹಾಗೂ ದಾಖಲಾತಿಗಳನ್ನು ಪರಿಶೀಲಿಸಿದ ನಂತರ ಪ್ರವೇಶಾತಿಗೆ ಅನುಮೋದನೆ (verified) ನೀಡುವ ಪ್ರಾದೇಶಿಕ ನಿರ್ದೇಶಕರು / ಪ್ರವೇಶಾತಿ ವಿಭಾಗವು ಪ್ರವೇಶಾತಿಗೆ ತಾತ್ವಿಕ ಒಪ್ಪಿಗೆ ನೀಡಬೇಕು.<br>• ವಿದ್ಯಾರ್ಥಿ ಈ ಪಟ್ಟಿಯ ಕ್ರ.ಸಂ.(2)ರಲ್ಲಿನ ದಾಖಲಾತಿಗಳನ್ನು ಅಪ್‌ಲೋಡ್ ಮಾಡಿ ರುವುದನ್ನು ಆಯಾ ಪ್ರಾದೇಶಿಕ ನಿರ್ದೇಶಕ / ಪ್ರವೇಶಾತಿ ವಿಭಾಗ ಪರಿಶೀಲಿಸಿರಬೇಕು. |
| 2 | ಅಲ್ಪ ಸಂಖ್ಯಾತ ಕಲ್ಯಾಣ ಇಲಾಖೆ | 1. ವಿದ್ಯಾರ್ಥಿಯು ಮುಸ್ಲಿಂ, ಜೈನ್, ಕ್ರಿಶ್ಚಿಯನ್, ಸಿಖ್, ಬುದ್ಧಿಸ್ಟ್ ಮತ್ತು ಪಾರ್ಸಿ ವರ್ಗಕ್ಕೆ ಸೇರಿದವರಾಗಿರಬೇಕು.<br>2. ಈ ಬಗ್ಗೆ ವಿದ್ಯಾರ್ಥಿಯು ಅಲ್ಪ ಸಂಖ್ಯಾತ ವರ್ಗದ ದೃಢೀಕರಣ ಪತ್ರ / ಜಾತಿ ಪ್ರಮಾಣ ಪತ್ರವನ್ನು ಹೊಂದಿರತಕ್ಕದ್ದು.<br>3. ವಿದ್ಯಾರ್ಥಿಯ ಕುಟುಂಬದ ವಾರ್ಷಿಕ ವರಮಾನ ರೂ: 8 ಲಕ್ಷಗಳು ಮೀರತಕ್ಕದ್ದಲ್ಲ. | 1. ಅಲ್ಪ ಸಂಖ್ಯಾತ ಕಲ್ಯಾಣ ಇಲಾಖೆ ಅನುಮೋದನೆ ನೀಡುತ್ತದೆ.<br>2. ಅಲ್ಪ ಸಂಖ್ಯಾತ ಇಲಾಖೆಯ ನಿಬಂಧನೆಗಳ ಪ್ರಕಾರ ವಿದ್ಯಾರ್ಥಿ ದಾಖಲಾತಿಗಳನ್ನು ಅಪ್‌ಲೋಡ್ ಮಾಡಿರುವುದನ್ನು ಅಲ್ಪ ಸಂಖ್ಯಾತ ಇಲಾಖೆಯು ಪರಿಶೀಲಿಸಿರಬೇಕು. |

### II. ಅಡ್ಮಿಷನ್ ಫ್ಲೋ ಚಾರ್ಟ್:

<table>
<tr><td>1. ವಿದ್ಯಾರ್ಥಿ ಅಲ್ಪ ಸಂಖ್ಯಾತ ಕಲ್ಯಾಣ ಇಲಾಖೆಯ ವೆಬ್‌ಸೈಟ್ ನಲ್ಲಿರುವ ವಿವಿಯ ಅಡ್ಮಿಷನ್ ಲಿಂಕ್ ಮೂಲಕ ಅರ್ಜಿ ಸಲ್ಲಿಸ ಬಹುದು; ಅಥವಾ<br>2. ವಿದ್ಯಾರ್ಥಿಯೇ ನೇರವಾಗಿ ವಿವಿಯ ಅಡ್ಮಿಷನ್ ಪೋರ್ಟಲ್ ಮೂಲಕ ಅರ್ಜಿ ಸಲ್ಲಿಸಬಹುದು; ಅಥವಾ;<br>3. ವಿದ್ಯಾರ್ಥಿಯು ದಾಖಲಾತಿಗಳೊಂದಿಗೆ ನೇರವಾಗಿ ವಿವಿಯ ಕೇಂದ್ರ ಕಚೇರಿ ಮೈಸೂರು ಅಥವಾ ಹತ್ತಿರದ ಪ್ರಾದೇಶಿಕ ಕೇಂದ್ರಗಳಿಗೆ ಭೇಟಿ ನೀಡಬಹುದು</td><td>ಈ ಮೂರು ಪ್ರಕರಣಗಳಲ್ಲಿ ವಿದ್ಯಾರ್ಥಿಯು ಎಲ್ಲಾ ಅಗತ್ಯ ದಾಖಲಾತಿಗಳೊಂದಿಗೆ ವಿವಿ ನಿಲಯಕ್ಕೆ ಪ್ರವೇಶಾತಿ ಪ್ರಕ್ರಿಯೆ ಮುಂದುವರೆಸಲು ವಿವಿಯ ಕೇಂದ್ರ ಕಚೇರಿ ಮೈಸೂರು ಅಥವಾ ಹತ್ತಿರದ ಪ್ರಾದೇಶಿಕ ಕೇಂದ್ರಗಳಿಗೆ ಕಡ್ಡಾಯವಾಗಿ ಭೇಟಿ ನೀಡಿ ಪ್ರವೇಶಾತಿ ಪ್ರಕ್ರಿಯೆಯ ಪ್ರಾಥಮಿಕ ಹಂತವನ್ನು ಪೂರೈಸಬೇಕು (ಇಲ್ಲವಾದಲ್ಲಿ ಈ ಯೋಜನೆಗೆ ಒಳಪಡುವುದಿಲ್ಲ).</td></tr>
<tr><td colspan="2">• ವಿದ್ಯಾರ್ಥಿಯ ಎಲ್ಲಾ ದಾಖಲಾತಿಗಳನ್ನು ಆಯಾ ಪ್ರಾದೇಶಿಕ ಕೇಂದ್ರ ಅಥವಾ ಕೇಂದ್ರ ಕಚೇರಿ ಪರಿಶೀಲಿಸಬೇಕು.</td></tr>
<tr><td colspan="2">• ದಾಖಲಾತಿಗಳ ಪರಿಶೀಲನೆಯ ನಂತರ ವೆರಿಫೈಡ್ ಎಂದು ನಮೂದಿಸುವ ಮೂಲಕ ವಿವಿಯ ತಾತ್ವಿಕ ಒಪ್ಪಿಗೆ ನೀಡುವುದು.</td></tr>
<tr><td colspan="2">• ನಂತರ ಆಯಾ ಆವೃತ್ತಿಯಲ್ಲಿ ಅರ್ಜಿ ಸಲ್ಲಿಸಿದ ಅಲ್ಪ ಸಂಖ್ಯಾತ ವರ್ಗದ ವಿದ್ಯಾರ್ಥಿಗಳ ಒಟ್ಟು ವಿವರಗಳನ್ನು ಅಲ್ಪ</td></tr>
</table>

| |
|---|
| ಸಂಖ್ಯಾತ ಕಲ್ಯಾಣ ಇಲಾಖೆಯು ಪರಿಶೀಲನೆ ಮಾಡಿ ಅನುಮೋದನೆ ನೀಡುತ್ತದೆ. |
| ➤ ವಿದ್ಯಾರ್ಥಿಯ ಪರವಾಗಿ ಶುಲ್ಕ ಪಾವತಿಸಲಾಗುವುದೆಂಬ ಅನುಮೋದನೆಯೊಡನೆ ಅಲ್ಪ ಸಂಖ್ಯಾತ ಕಲ್ಯಾಣ ಇಲಾಖೆಯು ಅನುಮೋದಿತ ಪಟ್ಟಿಯನ್ನು ವಿವಿ ನಿಲಯಕ್ಕೆ ಸಲ್ಲಿಸಬೇಕು. |
| ➤ ಅನುಮೋದಿತ ಪಟ್ಟಿಯಲ್ಲಿನ ವಿದ್ಯಾರ್ಥಿಗಳ ವಿವರದ ಆಧಾರದ ಮೇಲೆ ಆಯಾ ಪ್ರಾದೇಶಿಕ ಕೇಂದ್ರ ಅಥವಾ ಕೇಂದ್ರ ಕಚೇರಿ ವಿದ್ಯಾರ್ಥಿಯನ್ನು ಕರೆಸಿಕೊಂಡು ಅಗತ್ಯ ಮಾಹಿತಿ ಪಡೆದು ಪ್ರವೇಶಾತಿಯ ಅಂತಿಮ ಪ್ರಕ್ರಿಯೆ ಪೂರ್ಣಗೊಳಿಸಿ, ರೋಲ್ ನಂ ಜನರೇಟ್ ಮಾಡಿ, ಗುರುತಿನ ಪತ್ರದೊಂದಿಗೆ ಲಭ್ಯ ಬೋಧನಾ ಸಾಮಗ್ರಿಗಳನ್ನು ವಿತರಿಸಿ ದಾಖಲೆ ಇಡುವುದು. |

**III. <u>ಪ್ರಾದೇಶಿಕ ಕೇಂದ್ರಗಳಲ್ಲಿ ನಿರ್ವಹಿಸಬೇಕಾದ ಜವಾಬ್ದಾರಿಗಳು;</u>**

1. ಅಲ್ಪ ಸಂಖ್ಯಾತ ವರ್ಗದ ವಿದ್ಯಾರ್ಥಿಗಳು ವಿವಿ ನಿಲಯವು ಹೊಸದಾಗಿ ಅಲ್ಪ ಸಂಖ್ಯಾತ ವಿದ್ಯಾಥಿಗಳ ಪ್ರವೇಶಾತಿಗೆಂದೇ ಕ್ರಿಯೇಟ್ ಮಾಡಿರುವ ಲಾಗಿನ್ (https://minority.ksouportal.com/ ) ನ ಮೂಲಕ ವಿದ್ಯಾರ್ಥಿಗಳು ನೇರವಾಗಿ ಅರ್ಜಿ ಸಲ್ಲಿಸಿ ದಾಖಲಾತಿಗಳೊಂದಿಗೆ ಹತ್ತಿರದ ಆಯಾ ಪ್ರಾದೇಶಿಕ ಕೇಂದ್ರ/ಕೇಂದ್ರ ಕಚೇರಿ ಮೈಸೂರಿಗೆ ಭೇಟಿ ನೀಡಬೇಕು. ಅಥವಾ ಇತರೆ ವಿದ್ಯಾರ್ಥಿಗಳಂತೆ ನೇರವಾಗಿ ಹತ್ತಿರದ ಪ್ರಾದೇಶಿಕ ಕೇಂದ್ರಗಳಿಗೆ ದಾಖಲಾತಿಗಳೊಂದಿಗೆ ನೇರವಾಗಿ ಭೇಟಿ ನೀಡಬೇಕು.
2. 2025-26ರ ಜುಲೈ ಆವೃತ್ತಿಯ ಪ್ರವೇಶಾತಿಗೆ ಯುಜಿಸಿಯು ದಿನಾಂಕ: 15.09.2025 ವನ್ನು ಅಂತಿಮ ದಿನಾಂಕವೆಂದು ಘೋಷಿಸಿರುವುದರಿಂದ ಸರ್ಕಾರದ ಅಲ್ಪ ಸಂಖ್ಯಾತ ಇಲಾಖೆಯ ಶುಲ್ಕ ಪಾವತಿ ಯೋಜನೆಗೆ ಒಳಪಡುವ ವಿದಾರ್ಥಿಗಳು ದಾಖಲಾತಿಗಳೊಂದಿಗೆ ಅರ್ಜಿ ಸಲ್ಲಿಸುವ ಪ್ರಕ್ರಿಯೆಯನ್ನು ದಿನಾಂಕ: 20.08.2025ಕ್ಕೆ ಅಂತಿಮಗೊಳಸುವುದು.
3. ಅಗತ್ಯ ದಾಖಲಾತಿಗಳನ್ನು ವಿದ್ಯಾರ್ಥಿಯಿಂದ ಪಡೆದುಕೊಳ್ಳುವುದು.
4. ಇಂತಹ ವಿದ್ಯಾರ್ಥಿಗಳಿಗೆ ಅವರು ಬಯಸುವ ಕೋರ್ಸ್‌ನ ಶೈಕ್ಷಣಿಕ ವಿದ್ಯಾರ್ಹತೆಯನ್ನು ಹೊಂದಿದ್ದಾರೆಯೇ ಎಂಬುದನ್ನು ಸೂಕ್ಷ್ಮವಾಗಿ ಪರಿಶೀಲಿಸಿ ಖಚಿತಪಡಿಸಿಕೊಂಡು ಎಬಿಸಿ (ABC) ಮತ್ತು ಡೆಬ್ (DEB) ಐಡಿಯನ್ನು ಕ್ರಿಯೇಟ್ ಮಾಡಿ ನಂತರ ವಿದ್ಯಾರ್ಥಿಯ ಪರವಾಗಿ ಪ್ರವೇಶಾತಿ ಅರ್ಜಿ ಹಾಕುವ ಪ್ರಕ್ರಿಯೆಯನ್ನು ಪೂರ್ಣಗೊಳಸುವುದು.
5. ಅಲ್ಪ ಸಂಖ್ಯಾತ ವರ್ಗದ ಶುಲ್ಕ ಪಾವತಿ ಯೋಜನೆಗೆ ಪರಿಗಣಿಸುವ ಸಂಬಂಧದಲ್ಲಿನ ಮಾನದಂಡಗಳನ್ನು ವಿದ್ಯಾರ್ಥಿ ಪೂರೈಸಿರುವ ಬಗ್ಗೆ ದಾಖಲಾತಿಗಳನ್ನು ಪರಿಶೀಲಿಸಿ ಯೋಜನೆಗೆ ಅರ್ಹರಿರುವುದನ್ನು ಖಚಿತಪಡಿಸಿಕೊಳ್ಳುವುದು.
6. ಈ ಮೇಲಿನ ಪ್ರಕ್ರಿಯೆಗಳನ್ನು ಕೂಡಲೇ ಪೂರ್ಣಗೊಳಿಸಿ ವೆರಿಫೈಡ್ ಎಂದು ಅರ್ಜಿಯಲ್ಲಿ ನಮೂದಿಸುವ ಮೂಲಕ ಪ್ರವೇಶಾತಿಗೆ ತಮ್ಮ ತಾತ್ವಿಕ ಅನುಮೋದನೆಯನ್ನು ನೀಡುವುದು.
7. ಅನುಮೋದಿತ ಅರ್ಜಿಯ ಪ್ರತಿಯನ್ನು ದಾಖಲಾತಿಗಳೊಂದಿಗೆ ತಮ್ಮ ಕೇಂದ್ರ/ವಿಭಾಗದಲ್ಲಿ ಇಟ್ಟುಕೊಳ್ಳುವುದು.
8. ಪ್ರವೇಶಾತಿಗೆ ಅಲ್ಪ ಸಂಖ್ಯಾತ ಕಲ್ಯಾಣ ಇಲಾಖೆಯು ಅನುಮೋದನೆ ನೀಡಿ ಅನುಮೋದಿತ ಪಟ್ಟಿಯನ್ನು ವಿವಿ ನಿಲಯಕ್ಕೆ ಕಳುಹಿಸುತ್ತದೆ.
9. ಅಲ್ಪ ಸಂಖ್ಯಾತ ಇಲಾಖೆಯಿಂದ ಅನುಮೋದನೆ ಬರುತ್ತಿದ್ದಂತೆಯೇ ಆಯಾ ಪ್ರಾದೇಶಿಕ ಕೇಂದ್ರಗಳು ಆಯಾ ವಿದ್ಯಾರ್ಥಿಗಳನ್ನು ಸಂಪರ್ಕಿಸಿ ಪ್ರವೇಶಾತಿಯ ಅಂತಿಮ ಪ್ರಕ್ರಿಯೆಗೆ ಕೂಡಲೇ ಹಾಜರಾಗಲು ತಿಳಿಸಿ ದಾಖಲಾತಿಗಳನ್ನು ಪರಿಶೀಲಿಸಿ ರೋಲ್ ನಂಬರ್ ಜನರೇಟ್ ಮಾಡುವ ಮೂಲಕ ವಿದ್ಯಾರ್ಥಿಯ

ಪ್ರವೇಶಾತಿಯನ್ನು ಪೂರ್ಣಗೊಳಿಸಿ. ಗುರುತಿನ ಪತ್ರದೊಂದಿಗೆ ಲಭ್ಯ ಬೋಧನಾ ಸಾಮಗ್ರಿಗಳನ್ನು ವಿತರಿಸಿ ದಾಖಲೆ ಇಡುವುದು.

10. **ವಿದ್ಯಾರ್ಥಿಯ ಸಂಪೂರ್ಣ ಪ್ರವೇಶಾತಿ (Admissions starting process to ending process till the generation of roll number) ಕುರಿತ ಮೇಲಿನ ಎಲ್ಲಾ ಪ್ರಕ್ರಿಯೆಗಳು ಯುಜಿಸಿಯು ಪ್ರವೇಶಾತಿಗೆ ನಿಗದಿಪಡಿಸಿದ ಅಂತಿಮ ದಿನಾಂಕಕ್ಕೆ ಒಂದು ದಿನ ಮುಂಚಿತವಾಗಿ ಪೂರ್ಣಗೊಂಡಿರಬೇಕು.**
11. ಅಲ್ಪ ಸಂಖ್ಯಾತ ವರ್ಗದ ವಿದ್ಯಾರ್ಥಿಗಳ ಪ್ರವೇಶಾತಿಗೆ ಇರುವ ಅವಕಾಶಗಳನ್ನು ಪ್ರಾದೇಶಿಕ ಕೇಂದ್ರಗಳು ವ್ಯಾಪಕ ಪ್ರಚಾರ ನೀಡುವುದು. ಈ ನಿಟ್ಟಿನಲ್ಲಿ ಸರ್ಕಾರದ ಅಲ್ಪ ಸಂಖ್ಯಾತ ಕಲ್ಯಾಣ ಇಲಾಖೆಯ ಜಿಲ್ಲಾ ಮಟ್ಟದ ಕಚೇರಿಗಳ ಅಧಿಕಾರಿಗಳ ಸಹಕಾರವನ್ನು ಪಡೆದುಕೊಳ್ಳುವುದು ಹಾಗೂ ಈ ಬಗ್ಗೆ ಪ್ರಾದೇಶಿಕ ಕೇಂದ್ರಗಳ ವ್ಯಾಪ್ತಿಯಲ್ಲಿ ಬರುವ ಕರಾಮುವಿಯ ಅಧಿಕೃತ ಕಲಿಕಾರ್ಥಿ ಸಹಾಯ ಕೇಂದ್ರಗಳ ಮೂಲಕ ಈ ಯೋಜನೆಯ ವಿವರವನ್ನು ಅರ್ಹ ವಿದ್ಯಾರ್ಥಿಗಳ ಗಮನಕ್ಕೆ ತಂದು ವಿದ್ಯಾರ್ಥಿಗಳು ಸೌಲಭ್ಯಕ್ಕಾಗಿ ಪ್ರಾದೇಶಿಕ ಕೇಂದ್ರ/ಕೇಂದ್ರ ಕಛೇರಿಯನ್ನು ಸಂಪರ್ಕಿಸಲು ಸೂಚನೆ ನೀಡುವುದು.
12. ಅಲ್ಪ ಸಂಖ್ಯಾತ ವಿದ್ಯಾರ್ಥಿಗಳ ಪ್ರವೇಶಾತಿಗಾಗಿಯೇ ಬೆಂಗಳೂರಿನ ಹಜ್ ಭವನದಲ್ಲಿ ವಿಶ್ವವಿದ್ಯಾನಿಲಯದ ಪ್ರಾದೇಶಿಕ ಕೇಂದ್ರವನ್ನು ಸ್ಥಾಪಿಸಲಾಗಿದ್ದು ಹೆಚ್ಚಿನ ಮಾಹಿತಿಗೆ ಹಜ್ ಭವನದ ಅಧಿಕಾರಿಗಳನ್ನು / ಹಜ್ ಭವನದಲ್ಲಿರುವ ವಿವಿಯ ಪ್ರಾದೇಶಿಕ ಕೇಂದ್ರದ ನಿರ್ದೇಶಕರನ್ನು ಅಥವಾ ಪ್ರವೇಶಾತಿ ವಿಭಾಗವನ್ನು ಸಂಪರ್ಕಿಸಬಹುದಾಗಿದೆ (8277799990 / 9900667916 / 9945366062 / 9113512565 / 9611418726 / 9900506659 / 9035395137 / 8123469017 / 9844010407).

ಆದೇಶದ ಮೇರೆಗೆ

3/7/18

ಕುಲಸಚಿವರು

ಗೆ:

1. ನಿರ್ದೇಶಕರು, ಪ್ರವೇಶಾತಿ ವಿಭಾಗ, ಕರಾಮುವಿ, ಮೈಸೂರು.
2. ಎಲ್ಲಾ ಪ್ರಾದೇಶಿಕ ಕೇಂದ್ರಗಳು, ಕರಾಮುವಿ ಪ್ರಾದೇಶಿಕ ಕೇಂದ್ರಗಳು.
3. ಪ್ರಾದೇಶಿಕ ನಿರ್ದೇಶಕರು, ಕರಾಮುವಿ ಪ್ರಾದೇಶಿಕ ಕೇಂದ್ರ, ಹಜ್ ಭವನ, ಬೆಂಗಳೂರು.
4. ಪ್ರವೇಶಾತಿ ವಿಭಾಗದ ಎಲ್ಲಾ ಸಹಾಯಕ ಕುಲಸಚಿವರು ಹಾಗೂ ಅಧೀಕ್ಷಕರುಗಳು.
5. ಪ್ರವೇಶಾತಿ ವಿಭಾಗದ ಎಲ್ಲಾ ವಿಷಯ ನಿರ್ವಾಹಕರುಗಳು.

ಪ್ರತಿ:

1. ಎಲ್ಲಾ ಶಾಸನಬದ್ಧ ಅಧಿಕಾರಿಗಳು, ಕರಾಮುವಿ, ಮೈಸೂರು.
2. ಡೀನ್(ಅಧ್ಯಯನ ಕೇಂದ್ರ), ಕರಾಮುವಿ, ಮೈಸೂರು- ಈ ಬಗ್ಗೆ ವಿವಿಯ ಅಧಿಕೃತ ಪ್ರಾದೇಶಿಕ ಕೇಂದ್ರಗಳು ಹಾಗೂ ಕಲಿಕಾರ್ಥಿ ಸಹಾಯ ಕೇಂದ್ರಗಳ ಮೂಲಕ ವ್ಯಾಪಕ ಪ್ರಚಾರ ಮಾಡಿಸಲು ಕ್ರಮವಹಿಸುವುದು.
3. ನಿರ್ದೇಶಕರು, ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆ, ಹಜ್ ಭವನ, ಬೆಂಗಳೂರು.
4. ಉಪ ನಿರ್ದೇಶಕರು ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆ, ಹಜ್ ಭವನ, ಬೆಂಗಳೂರು.
5. ಸಹಾಯಕ ನಿರ್ದೇಶಕರು, ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆ, ಹಜ್ ಭವನ, ಬೆಂಗಳೂರು.
6. ಎಲ್ಲಾ ಅಧ್ಯಯನ ವಿಭಾಗಗಳ ಮುಖ್ಯಸ್ಥರುಗಳು, ಕರಾಮುವಿ, ಮೈಸೂರು – ಮೇಲ್ ಮೂಲಕ
7. ಡಾ:ಸಿ.ಜಿ.ನವೀನ್ ಕುಮಾರ್, ಸಂಯೋಜನಾಧಿಕಾರಿಗಳು, ವಿವಿ ಅಂತರ್ಜಾಲ ನಿರ್ವಹಣೆ, ಕರಾಮುವಿ – ಇವರಿಗೆ ಸದರಿ ಸುತ್ತೋಲೆಯನ್ನು ವಿವಿಯ ಅಧಿಕೃತ ಅಂತರ್ಜಾಲದಲ್ಲಿ ಹಾಗೂ ವಿವಿಯ KSOU Digital Academic Platform App ನಲ್ಲಿ ತುರ್ತಾಗಿ ಅಪ್‌ಲೋಡ್ ಮಾಡುವುದು.
8. ವಿಶೇಷಾಧಿಕಾರಿಗಳು, ಮಾನ್ಯ ಕುಲಪತಿಗಳ ಆಪ್ತಶಾಖೆ, ಕರಾಮುವಿ, ಮೈಸೂರು.
9. ಇನ್‌ಹಾಕ್ ಐಟಿ ಸಲ್ಯೂಷನ್ಸ್ ಪ್ರತಿನಿಧಿಗಳು – ಆಫ್‌ಲೈನ್ ಶಿಕ್ಷಣಕ್ರಮಗಳ ಪ್ರವೇಶಾತಿ ಪ್ರಕ್ರಿಯೆಯ ನಿರ್ವಹಣೆ ಇವರಿಗೆ – ಅಲ್ಪ ಸಂಖ್ಯಾತ ವರ್ಗದ ವಿದ್ಯಾರ್ಥಿಗಳ ಪ್ರವೇಶಾತಿ ಕುರಿತಂತೆ ಪ್ರವೇಶಾತಿ ಸಾಫ್ಟ್‌ವೇರ್‌ನಲ್ಲಿ ಅಗತ್ಯ ಪ್ರಕ್ರಿಯೆ ಕ್ರಮಗಳನ್ನು ಅಳವಡಿಸಿ, ಕೇಂದ್ರ ಕಚೇರಿ ಮೈಸೂರು ಹಾಗೂ ವಿವಿಯ ಅಧಿಕೃತ ಪ್ರಾದೇಶಿಕ ಕೇಂದ್ರಗಳಲ್ಲಿ ಮಾತ್ರವೇ ಪ್ರವೇಶಾತಿಗೆ ಅವಕಾಶ ಕಲ್ಪಿಸುವುದು. ಕಲಿಕಾರ್ಥಿ ಸಹಾಯ ಕೇಂದ್ರಗಳ ಮೂಲಕ ಲಾಗಿನ್ ಬಳಸಿ ಪ್ರವೇಶಾತಿ ಮಾಡಲು ಅವಕಾಶ ಕಲ್ಪಿಸದಿರಲು ಸೂಚಿಸಿದೆ.
10. ಎಲ್ಲಾ ನಿರ್ದೇಶಕರುಗಳು / ವಿಶೇಷಾಧಿಕಾರಿಗಳು / ಸಂಯೋಜನಾಧಿಕಾರಿಗಳು/ವಿದ್ಯಾರ್ಥಿ ಕ್ಷೇಮಪಾಲನಾ ಅಧಿಕಾರಿಗಳು - ಕರಾಮುವಿಯಲ್ಲಿನ ವಿವಿಧ ವಿಭಾಗಗಳು. – ಮೇಲ್ ಮೂಲಕ.
11. ನಿರ್ದೇಶಕರು–ಐಟಿ, ಕರಾಮುವಿ, ಮೈಸೂರು.
12. ಎಲ್ಲಾ ಉಪಕುಲಸಚಿವರು / ಸಹಾಯಕ ಕುಲಸಚಿವರು ವಿವಿಯ ವಿವಿಧ ವಿಭಾಗಗಳು. – ಮೇಲ್ ಮೂಲಕ.
13. ಸಂಯೋಜನಾಧಿಕಾರಿಗಳು, ವಿದ್ಯಾರ್ಥಿ ವೇತನ ಘಟಕ, ಕರಾಮುವಿ – – ಮೇಲ್ ಮೂಲಕ
14. ವಿವಿ ನಿಲಯದ ಸೂಚನಾ ಫಲಕಗಳು / ಮಾಹಿತಿ ಮತ್ತು ಮಾರ್ಗದರ್ಶಕ ಘಟಕ, ಪ್ರವೇಶಾತಿ ವಿಭಾಗ.
15. ಕಚೇರಿ ಪ್ರತಿ.
16. ರಕ್ಷಾ ಕಡತ